ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 30-03-2021 ಪ್ರಶ್ನೆ ಸಂಖ್ಯೆ : 2071(2444)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 30-03-2021

ಉತ್ತರಿಸುವ ಸಚಿವರು: ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು

ವಿಷಯ : ಒಳಚರಂಡಿ ಯೋಜನೆಯ ತ್ಯಾಜ್ಯ ಶುದ್ಧೀಕರಣ ಘಟಕದ ಕುರಿತು

(ಅ) ಕುಂದಾಪುರ ಪುರಸಭಾ ವ್ಯಾಪ್ತಿಯ 8ನೇ ವಾರ್ಡಿನಲ್ಲಿ ಪುರಸಭೆಯ ಒಳಚರಂಡಿ ಯೋಜನೆಯ ತ್ಯಾಜ್ಯ ಶುದ್ಧೀಕರಣ ಘಟಕ (ವೆಟ್ವೆಲ್) ನಿರ್ಮಾಣಕ್ಕೆ ಗುರುತಿಸಿದ ಸ್ಥಳವು ಜನವಸತಿ ಪ್ರದೇಶಕ್ಕೆ ಹತ್ತಿರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದರ ನಿರ್ಮಾಣಕ್ಕೆ ಸಾರ್ವಜನಿಕರ ಆಕ್ಷೇಪವಿರುವುದು ನಿಜವೇ; ಪ್ರಸ್ತಾವಿತ ಸ್ಥಳವು ಸಿ.ಆರ್ ಜೆಡ್ ವ್ಯಾಪ್ತಿಗೆ ಬರುವುದೇ; ಬಂದಲ್ಲಿ, ಸಿ.ಆರ್ ಜೆಡ್ ನಿಂದ ಅನುಮತಿ ಪಡೆಯಲಾಗಿದೆಯೇ; (ಸಿ.ಆರ್.ಜೆಡ್ ಅನುಮತಿ ಪತ್ರದ ಪ್ರತಿ ನೀಡುವುದು)

(ಇ) ಸದರಿ ಸ್ಥಳವನ್ನು ಖಾಸಗಿಯವರಿಂದ ಖರೀದಿಸುತ್ತಿರುವುದು ನಿಜವೇ; ಹೌದಾದಲ್ಲಿ, ಯಾವ ದರದಲ್ಲಿ ಯಾರಿಂದ ಖರೀದಿಸಲಾಗುವುದು; ಶಾಸನಬದ್ಧವಾಗಿ ಅಳತೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಜಾಗದ ನಕ್ಷೆಯ ಪ್ರತಿ ಒದಗಿಸುವುದು;

(ಈ) ಪ್ರಸ್ತಾವಿತ ಸ್ಥಳಕ್ಕೆ ದಾರಿಯಿದೆಯೇ; ಇದ್ದಲ್ಲಿ, ದಾರಿಯ ನಕ್ಷೆ ಒದಗಿಸುವುದು; ಇಲ್ಲವಾದ್ದಲ್ಲಿ, ದಾರಿ ಇಲ್ಲದೇ ಇದ್ದರೂ ಘಟಕವನ್ನು ನಿರ್ಮಿಸುವ ಉದ್ದೇಶವೇನು?